**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 443/2017** **CW**-6 **PW**-21

**ಸಾಕ್ಷಿಯನ್ನು ದಿಃ 03.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಕರಿಯಬೋವಿ |
| ತಂದೆಯ ಹೆಸರುಃ | ಲೇಟ್ ಹೆಚ್ ಕೆ ವೆಂಕಟ |
| ವಯಸ್ಸುಃ | 61 ವರ್ಷ |
| ವೃತ್ತಿಃ | ನಿವೃತ್ತ ಎ ಎಸ್ ಐ |
| ವಾಸ ಸ್ಥಳಃ | ಹೊಳೇನರಸೀಪುರ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2011 ರಿಂದ 2017 ರವರೆಗೆ ನಾನು ಚನ್ನರಾಯಪಟ್ಟಣದ ನಗರ ಪೋಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13.10.2016 ರಂದು ಬೆಳಗಿನ ಜಾವ 1.10 ರ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಠಾಣಾ ಮೊ. ಸಂಖ್ಯೆ 439/2016 ರಂತೆ ಪ್ರಕರಣವನ್ನು ದಾಖಲಿಸಿ ಪ್ರ ವ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೆ ನಿಪಿ-1ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ಪ್ರ ವ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-22 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ ಪಿ ಎಸ್ ರವರಿಂದ ಃ**

ಚಾಸಾ–1 ರವರು ಒಬ್ಬರೇ ಬಂದಿದ್ದರು. ನಿಪಿ–1 ನ್ನು ಚಾಸಾ–1 ರವರೇ ಬರೆದುಕೊಂಡು ಬಂದಿದ್ದರು. ಚಾಸಾ–1 ರವರು ನೀಡಿದ ಸುಳ್ಳು ದೂರಿನ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೂರು ಪಡೆದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ತನಿಖೆ ಮಾಡಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**